# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:-** ಶ್ರೀ ಎಂ.ಎಂ. ಮಾನೆ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಮೀನಘಡ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆ ರವರ ವಿರುದ್ಧ ಕರ್ನಾಟಕ ಲೋಕಾಯುಕ್ತ ವರದಿಯ ಹಿನ್ನಲೆಯಲ್ಲಿ ಅಂತಿಮ ದಂಡನಾ ಆದೇಶದ ಕುರಿತು.

**ಓದಲಾಗಿದೆ:-**
1) ಅಪರ ನಿಬಂಧಕರು (ವಿಚಾರಣೆಗಳು-4), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ. ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ-2868/2014/ಡಿಆರ್‌ಇ-4 ದಿನಾಂಕ:24.05.2016
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 316 ಗ್ರಾಪಂಕಾ 2016, ದಿ:14.09.2016
3) ಅಪರ ನಿಬಂಧಕರು (ವಿಚಾರಣೆಗಳು-9), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವಿಚಾರಣಾ ವರದಿ ಸಂಖ್ಯೆ: ಉಪಲೋಕ್-1/ಡಿಇ/455/2016/ಎಆರ್‌ಇ-9, ದಿನಾಂಕ:20.12.2018.
4) ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸು ಸಂಖ್ಯೆ: ಉಪಲೋಕ್-1/ಡಿಇ/455/2016/ಎಆರ್‌ಇ-9, ದಿನಾಂಕ:22.12.2018.
5) ಆಪಾದಿತ ನೌಕರರಿಗೆ ಜಾರಿಗೊಳಿಸಲಾದ ಸರ್ಕಾರದ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ: ಗ್ರಾಅಪ 30 ಗ್ರಾಪಂಕಾ 2019, ದಿನಾಂಕ:29.01.2019.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ(1)ರ ಪ್ರಸ್ತಾವನೆಯಲ್ಲಿ ಶ್ರೀ ಎಂ.ಎಂ. ಮಾನೆ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಮೀನಘಡ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆ ಇವರು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಾಗೂ 13ನೇ ಹಣಕಾಸು ಯೋಜನೆಯಡಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಶ್ರೀ ಹುಚ್ಚಪ್ಪ ಬಿನ್ ಛತ್ರಪ್ಪ, ಬಾರಿಕೇರ್ ಸಾಕೀನ ಅಮೀನಘಡ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ಸಲ್ಲಿಸಿದ ದೂರಿಗೆ ಸಂಬಂಧಿಸಿದಂತೆ ಎದುರುದಾರರ ವಿರುದ್ಧ ತನಿಖೆ ಕೈಗೊಂಡು ತನಿಖೆಯಲ್ಲಿ ಎದುರುದಾರರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಆಪಾಧಿತ ನೌಕರರು ದಿ:28.02.2015 ರಂದು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಕೆಸಿಎಸ್‌ಆರ್ ನಿಯಮಾವಳಿ 1957ರ ನಿಯಮ 214(2)(ಬಿ)(i)ರಡಿ ಇಲಾಖಾ ವಿಚಾರಣೆಗೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರು ಕೋರಿರುತ್ತಾರೆ. ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಎದುರುದಾರರಾದ ಶ್ರೀ ಎಂ.ಎಂ. ಮಾನೆ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಮಿನಘಡ ಗ್ರಾಮ ಪಂಚಾಯಿತಿ ಇವರ ವಿರುದ್ಧದ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214(2)(ಬಿ)(i)ರಡಿ ಇಲಾಖಾ ವಿಚಾರಣೆಗೆ ವಹಿಸಿ ಆದೇಶಿಸಲಾಗಿದೆ. ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ವಿಚಾರಾಣಾಧಿಕಾರಿಗಳು ಪ್ರಕರಣದ ಪೂರ್ಣ ಪ್ರಮಾಣದ ವಿಚಾರಣೆ ನಡೆಸಿ ದಿನಾಂಕ 20.12.2018 ರಂದು ಕೆಳಕಂಡ ಆರೋಪಗಳ ಕುರಿತು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆರೋಪವು ರುಜುವಾತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

> "While you DGO Sri. M.M. Mane working as Panchayath Development Officer, Ameenagad Gama Panchayath, Manvi Taluk, Raichur District ಒಂದು ಕುಟುಂಬಕ್ಕೆ ಒಂದು ವರ್ಷದಲ್ಲಿ ಒಂದು ಕೃಷಿ ಹೊಂಡ ಕಾಮಗಾರಿಯನ್ನು ನೀಡಬಹುದಾದ ನಿಯಮವಿದ್ದರೂ ಸಹ, ಆ ಒಂದೇ ಅರ್ಥಿಕ ವರ್ಷದಲ್ಲಿ, ಅಂದರೆ 2013-2014ನೇ ಅವಧಿಯಲ್ಲಿ 1ನೇ ಎದುರುದಾರ ಶ್ರೀಮತಿ ರಾಜೇಶ್ವರಿಯವರ ಕುಟುಂಬಕ್ಕೆ ಸೇರಿದ ಅವರ ಅತ್ತೆ 1) ಗಂಗಮ್ಮ ಗಂಡ ಹನುಮಂತ ಸಾಕೀನ: ಇರಕಲ್ಲ, ಭಾವನ ಹೆಂಡತಿ 2) ಶ್ರೀಮತಿ ದೇವಮ್ಮ ಗಂಡ ಚಂದಪ್ಪ, ಸಾಕೀನ: ಇರಕಲ್ಲ ಮತ್ತು ಭಾವ 3) ಶ್ರೀ ಚಂದಪ್ಪ ಬಿನ್ ಹನುಮಂತ ಸಾಕೀನ: ಇರಕಲ್ಲ (14 ವರ್ಷಗಳ ಹಿಂದೆ ತೀರಿಹೋದ ವ್ಯಕ್ತಿ) ರವರ ಹೆಸರಿನಲ್ಲಿ ಕೃಷಿ ಹೊಂಡದ

ಕಾಮಗಾರಿಯನ್ನು ಮಾಡಿಸಿದ ಬಗ್ಗೆ ದಾಖಲಾತಿಗಳನ್ನು ಸೃಷ್ಟಿಸಿ 4,00,000/ ಸರ್ಕಾರದ ಅನುದಾನದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತೀರಾ and therefore you DGO has failed to maintain absolute integrity and devotion to duty and committed an act which is unbecoming of a Government Servants and therefore you are guilty of misconduct under Rule 3(1)(i) to (iii) of KCS (Conduct) Rules 1966. Hence, this charge."

ಆಪಾಧಿತ ನೌಕರರ ಮೇಲಿನ ಆರೋಪಗಳು ರುಜುವಾತಾಗಿದೆ ಎಂದು ಸಲ್ಲಿಸಿರುವ ವಿಚಾರಣಾ ವರದಿಯ ಕುರಿತು ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಮಾನ್ಯ ಉಪಲೋಕಾಯುಕ್ತರು ದಿನಾಂಕ 22.12.2018ರ ಶಿಫಾರಸ್ಸಿನಲ್ಲಿ ಆಪಾಧಿತ ಸರ್ಕಾರಿ ನೌಕರ ಶ್ರೀ ಎಂ.ಎಂ. ಮಾನೆ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ. 4,00,000/- ಗಳನ್ನು ಇವರ ಪಿಂಚಣಿ ವೇತನಗಳಿಂದ ವಸೂಲಿ ಮಾಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (5)ರಲ್ಲಿ ಆಪಾಧಿತ ಸರ್ಕಾರಿ ನೌಕರ ಶ್ರೀ ಎಂ.ಎಂ. ಮಾನೆ ಇವರಿಗೆ ವಿಚಾರಾಣಾಧಿಕಾರಿಯವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿರುವ ದಿನಾಂಕ 20.12.2018ರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರು ದಿನಾಂಕ 22.12.2018 ರಂದು ಮಾಡಿರುವ ಶಿಫಾರಸ್ಸಿನ ಪ್ರತಿಗಳೊಂದಿಗೆ 2ನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿದೆ.

ಆಪಾಧಿತ ನೌಕರರು ದಿನಾಂಕ 29.01.2019 ರಂದು ಜಾರಿಗೊಳಿಸಲಾದ 2ನೇ ಕಾರಣ ಕೇಳುವ ನೋಟೀಸಿಗೆ ಯಾವುದೇ ಲಿಖಿತ ಸಮಜಾಯಿಷಿ ಸಲ್ಲಿಸಿರುವುದಿಲ್ಲ. ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಯಚೂರು ರವರ ಕಚೇರಿಯ ಸಂಪರ್ಕಕ್ಕೂ ಲಭ್ಯವಾಗಿರುವುದಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಆಪಾಧಿತ ನೌಕರರಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳು 214(1)(ಎ)(ಬಿ) ರನ್ವಯ ಅವರ ಪಿಂಚಣಿ ವೇತನದಲ್ಲಿ ರೂ. 4,00,000/- ಗಳನ್ನು ವಸೂಲಿ ಮಾಡುವ ದಂಡನೆ ವಿಧಿಸಲು ಶಿಸ್ತು ಪ್ರಾಧಿಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/30/ಗ್ರಾಪಂಕಾ/2019, ಬೆಂಗಳೂರು, ದಿನಾಂಕ: 16ನೇ ಆಗಸ್ಟ್ 2022.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ.ಎಂ. ಮಾನೆ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಮೀನಘಡ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆ ಇವರ ವಿರುದ್ಧದ ಆರೋಪಗಳು ರುಜುವಾತಾಗಿರುವುದರಿಂದ ಕರ್ನಾಟಕ ಸಿವಿಲ್ ಸೇವಾ ನಿಯಮಗಳು 214(1)(ಎ)(ಬಿ) ರನ್ವಯ ಅವರ ಪಿಂಚಣಿ ವೇತನದಲ್ಲಿ ರೂ. 4,00,000/- (ನಾಲ್ಕು ಲಕ್ಷ) ಗಳನ್ನು ವಸೂಲಿ ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 16/8/22
(ನವೀನ್ ಕುಮಾರ್ ಬಿ.)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

16/8/22

<u>ಇವರಿಗೆ:-</u>

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ, ಬಹುಮಹಡಿ ಕಟ್ಟಡ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು

4) ಅಪರ ನಿಬಂಧಕರು(ವಿಚಾರಣೆಗಳು-9), ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
5) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ.
6) ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.
7) ಶ್ರೀ ಎಂ.ಎಂ. ಮಾನೆ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಮೀನಘಡ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆ.
8) ನಿರ್ದೇಶಕರು (ಇ-ಆಡಳಿತ), ಇಲಾಖಾ ವೆಬ್-ಸೈಟಿನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.